ಮನೆಗಳು ಹೇಗೆ ಏಳುತ್ತವೆ ಎನ್ನುವುದನ್ನು ನೋಡಿ. ದಿಢೀರನೆ ಒಂದೇ ರಾತ್ರಿಯಲ್ಲಿ 300 ಮನೆಗಳು ಎದ್ದಿವೆ. ಕೃಷ್ಣರಾಜ ಮಾರ್ಕೆಟ್ ಸುತ್ತಮುತ್ತ ವಿಕ್ಟೋರಿಯಾ ಆಸ್ಪತ್ರೆಯ ಪಕ್ಕ ಮತ್ತೊಂದು ಕಡೆ ಅನ್ಯಾಯ, ಅಕ್ರಮ ನಡೆಯುತ್ತಿದೆ. ಇದಕ್ಕೆ ಲಗಾಮು ಹಾಕಬೇಕಾಗಿದೆ. ಇದರ ಬಗ್ಗೆ ಸರ್ಕಾರ ಕೂಡಲೇ ಹೇಳಿಕೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಬಗ್ಗೆ ಚರ್ಚೆಯಾಗಿ ನಾಳೆ ತೀರ್ಮಾನಕ್ಕೆ ಬರೋಣ. ಈಗ ಮಾತ್ರ ಕಟ್ಟಡ ಕಟ್ಟುವುದಕ್ಕೆ ತಕ್ಷಣ ನಿಲ್ಲಿಸಬೇಕೆಂದು ಆಗ್ರಹ ಪಡಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಈ ಜನರಿಗೆ ಅನುಕೂಲ ಮಾಡಬೇಕೆಂಬ ಉದ್ದೇಶದಿಂದ ಕೆ.ಆರ್. ಮಾರ್ಕೆಟ್‌ನಲ್ಲಿ ಕಟ್ಟಡದ ಕೆಲಸ ನಡೆಯುತ್ತಿದೆ. ನಮ್ಮ ಸರ್ಕಾರ ಇದ್ದಾಗ ಆ ಕೆಲಸ ನಡೆದು ಈಗ ಫಸ್ಟ್ ಫ್ಲೋರ್ ಮುಗಿದಿದೆ. ಇವತ್ತು ಕಾರ್ಪೋರೇಷನ್ ಕಮಿಷನರ್ ಟೆಂಪೊರರಿ ಅಕಾಮಡೇಷನ್ ಮಾಡುತ್ತೇವೆಂದು ಹೇಳುತ್ತಾರೆ. ಇವತ್ತಿನ ದಿವಸ ಈ ರೀತಿ ಆಗುತ್ತಿರುವುದನ್ನು ಕೂಡಲೇ ರದ್ದು ಪಡಿಸಬೇಕು. ಈ ಬಗ್ಗೆ ನಮಗೆ ಸರ್ಕಾರದಿಂದ ಭರವಸೆ ಬೇಕು.

ಶ್ರೀ ವಾಟಾಳ್ ನಾಗರಾಜ್ : ಒಂದು ದಿನ ನಿಂತರೆ ಸಾಕು, ಕೋರ್ಟಿಗೆ ಹೋಗಿ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಸಿ. ಬೈರೇಗೌಡ : ಇದಕ್ಕೆ ವಿಶೇಷವಾದ ಕಾನೂನು ಇದೆ. ಪಾರ್ಕ್, ಸಿವಿಕ್ ಅಮೆನಿಟೀಸ್ ಜಾಗಗಳು ಏನಿವೆ, ಅದು ಕಾರ್ಪೋರೇಷನ್ ಏರಿಯ ಇರಬಹುದು, ಬಿಡಿಎ. ಏರಿಯ ಇರಬಹುದು. ಇವನ್ನು ಅಕ್ರಮ ಮಾಡಬಾರದೆಂದು ಕಾನೂನು ಇದೆ. ಇರತಕ್ಕ ಕಾನೂನನ್ನು ಉಲ್ಲಂಘಿಸಿ ಸರ್ಕಾರ ಕಾರ್ಪೋರೇಷನ್ ಕೆಲಸ ಮಾಡುವುದಾದರೆ ಈ ರಾಜ್ಯದಲ್ಲಿ ಕಾನೂನನ್ನು ರಕ್ಷಿಸುವವರು ಯಾರು? ಸದನದಲ್ಲಿ ಮಾಡಿರುವ ಕಾನೂನುಗಳಿಗೆ ಸರ್ಕಾರ ಗೌರವ ಕೊಡದಿದ್ದರೆ ಇನ್ನೆಲ್ಲಿ ಈ ಕಾನೂನಿಗೆ ಗೌರವ ಸಿಗುತ್ತದೆ? ನಾವು ಏತಕ್ಕೆ ಇಲ್ಲಿ ಕೂರಬೇಕು? ಕಾನೂನು ಮಾಡುವುದಾದರೂ ಏತಕ್ಕೆ? ಈ ಸಭೆ ಕಾನೂನುಗಳನ್ನು ಏತಕ್ಕೆ ಮಾಡಬೇಕು. ಕಾನೂನಿಗೆ ವಿರುದ್ಧವಾದ ಕೆಲಸವನ್ನು ಇವರೇ ಮಾಡುವುದಕ್ಕೆ ಹೊರಟರೆ ಆ ಕಾನೂನನ್ನು ರಕ್ಷಣೆ ಮಾಡುವವರು ಯಾರು ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಈಗಾಗಲೇ ಮಾನ್ಯ ಸದಸ್ಯರು ಹಲವಾರು ವಿಚಾರಗಳನ್ನು ಎತ್ತಿದ್ದಾರೆ. ನಾನಾದರೂ ಭರವಸೆ ಕೊಡುತ್ತೇನೆ, ತಕ್ಷಣ ಯಾವುದೇ ಕನ್‌ಸ್ಟ್ರಕ್ಷನ್ ನಡೆಯುತ್ತಿದ್ದರೂ ಅದನ್ನು ನಿಲ್ಲಿಸುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಲಾಟ್‌ಮೆಂಟ್ ಕಾರ್ಯ ನಡೆಯುತ್ತಿದೆ

ಶ್ರೀ ಕೆ.ಜೆ. ಜಾರ್ಜ್ : ಈಗ ನನ್ನ ಹತ್ತಿರ ಯಾವುದೇ ಮಾಹಿತಿ ಇಲ್ಲ, ನಾಳೆ ಗಮನ ಸೆಳೆಯುವ ಸೂಚನೆ ಬಂದಾಗ ಉತ್ತರಿಸುತ್ತೇನೆ.

ಗಮನ ಸೆಳೆಯುವ ಸೂಚನೆ

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೆ, ಕರ್ನಾಟಕ - ಕೇರಳ ಗಡಿಯಲ್ಲಿರುವ ಮೂಲಹೊಳೆ ಅಭಯಾರಣ್ಯ ಸಮೀಪದ ಸುಮಾರು 500 ಎಕರೆ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದು ಲಕ್ಷಾಂತರ ರೂಪಾಯಿ ನಷ್ಟವಾಗಿರುವುದರ ಬಗ್ಗೆ ಅರಣ್ಯ ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಸಿಗ್ನೇಚರ್ ಹಾಕಿದ್ದೆ.

ಅಧ್ಯಕ್ಷರು : 10 ಜನ ಮಾನ್ಯ ಸದಸ್ಯರು ನೋಟೀಸ್ ಕಳುಹಿಸಿದ್ದರು. ಅದನ್ನು ಮಧ್ಯಾಹ್ನ ಡ್ರಾ ಮಾಡಿದಾಗ 5 ಹೆಸರು ಪಟ್ಟಿಯಲ್ಲಿ ಏನು ನಮೂದಾಗಿದೆ ಈ ಐದು ಹೆಸರುಗಳು ಬಂತು.

ಶ್ರೀ ಆರ್.ವಿ. ದೇಶಪಾಂಡೆ : ಹತ್ತು ಜನ ಯಾರು ಹೇಳಿ. ಏಕೆಂದರೆ ನಾನೂ ಸಹಿ ಹಾಕಿದ್ದೆ.

ಅಧ್ಯಕ್ಷರು : ಶ್ರೀ ರಾಜುಗೌಡ, ಶ್ರೀ ಪಿ.ಜಿ. ಆರ್. ಸಿಂಧ್ಯಾ, ಶ್ರೀ ವಾಟಾಳ್ ನಾಗರಾಜ್, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಕೆ. ಲಕ್ಷ್ಮಪ್ಪ, ಶ್ರೀ ಆರ್.ವಿ. ದೇಶಪಾಂಡೆ, ಶ್ರೀ ಡಿ.ಬಿ. ಚಂದ್ರೇಗೌಡ; ಶ್ರೀ ಸಿ. ಬೈರೇಗೌಡ, ಶ್ರೀ ಜೀವರಾಜ್ ಆಳ್ವ ಮತ್ತು ಪ್ರೊ: ಎಂ.ಡಿ. ನಂಜುಂಡಸ್ವಾಮಿ-ಈ ಹತ್ತು ಮಾನ್ಯ ಸದಸ್ಯರುಗಳು.

ಶ್ರೀ ಎಂ. ವೀರಪ್ಪ ಮೊಯಿಲಿ (ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ವಿಧಾನ ಪರಿಷತ್ತಿನಲ್ಲಿ ಅವರ ಪ್ರಶ್ನೆ ಇರುವುದರಿಂದ ಅಲ್ಲಿದ್ದಾರೆ. ಅರ್ಧ ಗಂಟೆಯಲ್ಲಿ ಬರುತ್ತಾರೆ. ಆದ್ದರಿಂದ ಆಮೇಲೆ ತೆಗೆದುಕೊಳ್ಳಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಬಂದಮೇಲೆ ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು : ಅವರು ಬಂದಮೇಲೆ ನೋಡೋಣ.

ನಿಯಮ 334ರ ಮೇಲೆ ಚರ್ಚೆ

(1) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ನೀಡುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಯೋಜನೆಯನ್ನು ಕಾರ್ಯಗತಗೊಳಿಸಲು ಹಲವಾರು ರೈತರ ಬೇಸಾಯದ ಗದ್ದೆಗಳು ಮತ್ತು ತೆಂಗು ಮುಂತಾದ ಫಲಭರಿತ ತೋಟಗಳ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು ಈ ಭೂಮಿಯನ್ನು ಕಳೆದುಕೊಂಡ ಸಂತ್ರಸ್ಥರಿಗೆ ಪರಿಹಾರಧನವನ್ನು ಸರಿಯಾಗಿ ಪಾವತಿಸದೇ ಇರುವುದು ಹಾಗೂ ಭೂಮಿಯ ಬೆಲೆಗಳನ್ನು ಸರಿಯಾದ ಧಾರಣೆಗೆ ನಿಗದಿಪಡಿಸದೇ 5000 ರೂಪಾಯಿ ಬೆಲೆ ಬಾಳುವ ಭೂಮಿಗೆ ಕೇವಲ 500 ರೂಪಾಯಿ ನಿಗದಿಪಡಿಸಿರುವುದು, 100 ತೆಂಗಿನಕಾಯಿ ಬೆಳೆಯುವ ಮರಕ್ಕೆ 4000ರಿಂದ 5000 ರೂಪಾಯಿ ತನಕ ತೋಟಗಾರಿಕೆ ಇಲಾಖೆಯವರು ಬೆಲೆ ಕಟ್ಟಿದರೂ ಕಂದಾಯ ಇಲಾಖೆಯವರು ಕೇವಲ 300ರಿಂದ 400 ರೂಪಾಯಿತನಕ ಬೆಲೆ ಕಟ್ಟುತ್ತಿರುವುದಾಗಿ ವದಂತಿಗಳು ಕೇಳಿ ಬರುತ್ತಿದೆ. ಮತ್ತು ಇರುವ ಭೂಮಿಯನ್ನು ಪೂರ್ತಿ ಕಳೆದುಕೊಂಡ ಸಂತ್ರಸ್ಥರಿಗೆ ಬದಲಿ ಭೂಮಿಯ ವ್ಯವಸ್ಥೆ ಮಾಡದೇ ಇರುವುದು ಈ ರೀತಿ ಅವರಿಗೆ ಬೇರೆ ಮನೆ ಕೆಲಸ ಪೂರ್ತಿಯಾಗುವ ತನಕ ಅವಕಾಶ ಕೊಡದಿರುವುದು ಮುಂತಾದ ಈ ಸಮಸ್ಯೆಗಳ ಗೊಂದಲಮಯದೊಳಗೆ ಪರಿಹಾರದ ದಾರಿ ಕಾಯುತ್ತಿದ್ದಾರೆ.

ಆದ್ದರಿಂದ ಈ ಬಗ್ಗೆ ತುರ್ತು ಗಮನ ಹರಿಸಿ ಇವರ ಭೂಮಿಗಳಿಗೆ ಮಾರುಕಟ್ಟೆ ಬೆಲೆಯ ಧಾರಣೆ ನಿಗದಿ ಪಡಿಸುವುದು, ಪರಿಹಾರವನ್ನು ಅತೀ ಶೀಘ್ರದಲ್ಲಿ ಪಾವತಿಸುವುದು, ಇರುವ ಪೂರ್ತಿ ಭೂಮಿ ಕಳೆದುಕೊಂಡವರಿಗೆ ಬದಲಿ ಭೂಮಿಯ ವ್ಯವಸ್ಥೆ ಮಾಡಿ ಮನೆಕೆಲಸ ಪೂರ್ತಿಯಾಗುವ ತನಕ ಅವಕಾಶ ನೀಡುವುದು ಇವೇ ಮುಂತಾದವುಗಳ